ಕಥೆ

# ಯಡಾಂಬ ನಾಗರಾಜರು ಮತ್ತು ಅನಾಮತ್ತಿ ಶೇಖರಿಯೂ



**ಗೋವಿಂದರಾಜು ಎಂ. ಕಲ್ಲೂರು**

ಕಲೆ: ಮುರಳೀಧರ್ ರಾಥೋಡ್

ಯೂನಿವರ್ಸಿಟಿಯಿಂದ ಮಂತ್ಲಿ ಆರು ಸಾವಿರ ಸ್ಕಾಲರ್‌ಶಿಪ್ ಪಡೆದು ಡಾ. ಯಡಾಂಬ ನಾಗರಾಜರ ಬಳಿ ಪಿಎಚ್.ಡಿಗೆ ಸೇರಿಕೊಂಡಿದ್ದ ರಾಮಾಂಜಿನಿಯು ಅಂಗೋ ಇಂಗೋ ದೇಕಾಡಿಕೊಂಡು ಕಲ್ಲೋಕಿಯಂ ಮುಗಿಸಿ ಮಹಾ ಪ್ರಬಂಧವ ತಿದ್ದಿತೀಡಿ ವಿಶ್ವವಿದ್ಯಾನಿಲಯಕ್ಕೆ ಮೌಲ್ಯಮಾಪನಕ್ಕೆಂದು ಸಲ್ಲಿಸಿದ್ದ. ಇದಾಗಿ ಆರು ತಿಂಗಳಾದರೂ 'ಕಾಣುತ್ತಿರುವ ಕೈಗಳ' ಆಟದಲ್ಲಿ ಪ್ರಬಂಧದ ಮೌಲ್ಯಮಾಪನ ವರದಿಗಳನ್ನು ತನ್ನ ಗುರುವೇ ತಡೆಹಿಡಿದಿರೋದು ಕಂಡು ಕೇಳಿ ರೋಸಿ ಹೋಗಿದ್ದ.

ರಾಮಾಂಜಿನಿ ಮತ್ತು ಅವನ ಗುರುಗಳ ನಡುವೆ ಹೆಬ್ಬೆಟ್ಟು-ತೋರುಬೆಟ್ಟುಗಳ ನಾಣ್ಯ ಚಿಮ್ಮುವ ಲಯಬದ್ಧ ಕುಣಿತದ ವಿಚಾರದಲ್ಲಿ ಚೂರು ಮನಸ್ತಾಪವಾಗಿ, ಜೀವ ಹೋಗುತ್ತಿದ್ದರೂ ಬಿಡಿಗಾಸನ್ನೂ ಬಿಚ್ಚದ ಇವನಿಗೂ, ಕಸದ ಮೇಲಿದ್ದರೂ ಕಾಸೇ ಮಹಾಪ್ರಸಾದವೆಂದು ನಾಲಿಗೆಯಲ್ಲಿ ಎತ್ತಿಕೊಳ್ಳುವ ಅವನ ಗುರುವಿಗೂ ಉಯ್ದಕ್ಕಿ ಬೇಯುತ್ತಿರಲಿಲ್ಲ. ಈ ಶೀತಲೋಷ್ಣಸಮರವನ್ನು ಇಲ್ಲವಾಗಿಸಬೇಕೆಂದು ರಾಮಾಂಜಿನಿ ಹಲವು ಬಾರಿ ಪ್ರಯತ್ನಿಸಿದನಾದರೂ ನಡುಬಗ್ಗಿಸಿ ಗುರುದಕ್ಷಿಣೆ ಸಲ್ಲಿಸಲು ಸಿಕ್ಕಾಪಟ್ಟೆ ಹಿಡಿದಾಡುತ್ತಿದ್ದ. ಯಾರಾದರೂ ಕೊಟ್ಟುಬಿಡ್ಲ ಅತ್ತ... ಅಂದ್ರೆ ಗುರುದಕ್ಷಿಣೆ ನೀಡುವುದೂ, ಆಕಾಶದ ಉದ್ದ-ಅಗಲಗಳನ್ನು ಅಳೆಯುವುದೂ ಒಂದೇ ಕೆಲಸ, ಹುಲುಮಾನವನಾದ ನನ್ನಿಂದ ಇದು ಸಾಧ್ಯವೇ? ಎಂದು 'ಶಬರಿಮಲೆ ಸ್ವಾಮಿ ಅಯ್ಯಪ್ಪ' ಸಿನಿಮಾದ ಡೈಲಾಗ್ ಹೊಡೀತಿದ್ದ. ಇವನು ಹೀಗೆ ಸಿನಿಮಾ ಡೈಲಾಗ್ ಹೊಡೆದು ಗೈಡ್‌ನ ಮರ್ಯಾದಿಯನ್ನು ಕ್ಯಾಂಪಸ್ಸಿನ ತುಂಬಾ 'ಹತ್ತು ರೂಪಾಯಿಗೆ ಮೂರು-ನಾಲ್ಕು' ಎಂಬಂತೆ ಮಾರುತ್ತಿದ್ದ ಖೇದಕರ ವಿಷಯವನ್ನು ಅವರಿವರಿಂದಲೂ ಯೂನಿವರ್ಸಿಟಿಯ ಗುಪ್ತಶಿಷ್ಯ ಬಣದಿಂದಲೂ ಕೇಳಿ ಕೇಳಿ ರೋಸಿಹೋಗಿದ್ದ ಗುರುಗಳು 'ಅವನು ಅದೆಂಗೆ ಪಿಎಚ್.ಡಿ ತಗಂತಾನೆ ನೋಡ್ತೀನಿ' ಅಂತ ಚಿಟಕಿ ಹಾಕಿ ಹುಬ್ಬಾರಿಸಿದ್ದರು!

ಇಂಥಾ ಆಘಾತಕಾರಿ ಮಾತಿನಾಸ್ತ್ರದಿಂದ ನಡುಗಿಹೋದ ರಾಮಾಂಜಿನಿಯು, ಸಹಸ್ರ ಕಪಟನಾಟಕ ಸೂತ್ರಧಾರಿಗಳಾದ ಗುರುಗಳ ಮಹಿಮಾ ಲೀಲಾವಳಿಗಳನ್ನೆಲ್ಲ ತನ್ನ ಆಪ್ತ ಗೆಳೆಯನೂ ಸ್ಟೂಡೆಂಟ್ ಫೆಡರೇಷನ್‌ನ ಜಿಲ್ಲಾ ಅಧ್ಯಕ್ಷನೂ ಆದ ದಬ್ಬೇಗಟ್ಟದ ಕಿಲಾಡಿ ಕೆಂಪಯ್ಯನ ಬಳಿ ತೋಡಿಕೊಂಡು, ಗೊಳೋ... ಎಂದಿದ್ದ. ಜಿಲ್ಲೆಯಲ್ಲಿಯೇ ಬಹಳ 'ಚಾಲಾಕಿ ಸಂಘಟಕ' ಎಂದು ಹೆಸರುವಾಸಿಯಾಗಿದ್ದ ದಬ್ಬೇಗಟ್ಟದ ಕಿಲಾಡಿ